# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 207

ಸದಸ್ಯರ ಹೆಸರು : ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 12-07-2018

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 6ನೇ ವೇತನ ಆಯೋಗವು ರಾಜ್ಯ ಸರ್ಕಾರಕ್ಕೆ ಎಷ್ಟು ವರದಿಗಳನ್ನು ನೀಡಿದೆ; ಆ ವರದಿಗಳ ಪ್ರತಿ ನೀಡುವುದು; (ಮಧ್ಯಂತರ ಹಾಗೂ ಅಂತಿಮ ವರದಿಯ ಪ್ರತಿ ನೀಡುವುದು) | 6ನೇ ರಾಜ್ಯ ವೇತನ ಆಯೋಗವು ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಯ ಪರಿಷ್ಕರಣೆ ಕುರಿತಂತೆ 3 ಸಂಪುಟಗಳಲ್ಲಿ ವರದಿಯನ್ನು ನೀಡಿರುತ್ತದೆ. |
| ಆ | ಸದರಿ ಆಯೋಗವು ಮಾಡಿರುವ ಶಿಫಾರಸ್ಸುಗಳೇನು; ಆ ಎಲ್ಲಾ ಶಿಫಾರಸ್ಸುಗಳನ್ನು ಸರ್ಕಾರ ಜಾರಿಗೊಳಿಸಿದೆಯೇ? (ಸಂಪೂರ್ಣ ವಿವರ ನೀಡುವುದು) | ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿ ಮತ್ತು ಕೆಲವು ಭತ್ಯೆಗಳನ್ನು ಮಾತ್ರ ಪರಿಷ್ಕರಿಸಿ ಆದೇಶ ಹೊರಡಿಸಲಾಗಿರುತ್ತದೆ. ಆಯೋಗದ ವರದಿಗಳಲ್ಲಿನ ಇತರೆ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಆಯೋಗದ ವರದಿಯು ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಇ | ಎಲ್ಲಾ ಸರ್ಕಾರಿ ನೌಕರರಿಗೆ ನಿಗದಿಪಡಿಸಿದ ವೇತನ ಶ್ರೇಣಿಯ ಬುಕ್‌ಲೆಟ್ ಪ್ರತಿ ಹಾಗೂ ನೌಕರರಿಗೆ ನೀಡಿರುವ ಪ್ರಸ್ತುತ ಹೆಚ್.ಆರ್.ಎ. ಹಾಗೂ ಈ ಹಿಂದೆ ನೀಡಿರುವ ಹೆಚ್.ಆರ್.ಎ.ಗಳ ತುಲನಾತ್ಮಕ ವಿವರ ನೀಡುವುದು; | ಸರ್ಕಾರಿ ನೌಕರರ ಪರಿಷ್ಕೃತ ವೇತನ ಶ್ರೇಣಿಗಳ ಬುಕ್‌ಲೆಟ್‌ನ ಮಾಹಿತಿಗಳು ಅಂತರ್ಜಾಲತಾಣ www.finance.kar.nic.in ರಲ್ಲಿ ಲಭ್ಯವಿರುತ್ತವೆ. ಆದಾಗ್ಯೂ, ಕೋರಲಾದ ಮಾಹಿತಿಯನ್ನು ಒದಗಿಸಿದೆ.<br><br>2012 ಮತ್ತು 2018ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಈ ಕೆಳಗಿನ ಪ್ರಕಾರ ಮನೆ ಬಾಡಿಗೆ ಭತ್ಯೆಯ ದರಗಳು ನಿಗದಿಯಾಗಿರುತ್ತದೆ. |

| ಜನಸಂಖ್ಯೆ | ವರ್ಗೀಕರಣ | ದರಗಳು ಮೂಲ ವೇತನದ ಶೇಕಡ | |
|---|---|---|---|
| | | 2012 | 2018 |
| 25 ಲಕ್ಷ ಮತ್ತು ಅದಕ್ಕೂ ಹೆಚ್ಚು | ಎ | 30 | 24 |
| 5 ಲಕ್ಷದಿಂದ 25 ಲಕ್ಷದವರೆಗೆ | ಬಿ | 20 | 16 |
| 5 ಲಕ್ಷಕ್ಕಿಂತ ಕಡಿಮೆ | ಸಿ | 10 | 8 |

| | | |
|---|---|---|
| ಈ | ಪಿಂಚಣಿ, ನಿವೃತ್ತಿ ಉಪದಾನ ಮತ್ತು ಉಪಲಬ್ಧಗಳ ವಿವರವನ್ನು ಈ ಹಿಂದಿನ ವೇತನ ಶ್ರೇಣಿ ಹಾಗೂ ಪ್ರಸ್ತುತ ಜಾರಿ ಮಾಡಿರುವ ವೇತನ ಶ್ರೇಣಿಗಳ ನಡುವೆ ತುಲನೆ ಮಾಡಲಾಗುವುದೇ? (ಸಂಪೂರ್ಣ ವಿವರ ನೀಡುವುದು) | ರಾಜ್ಯ ಸರ್ಕಾರಿ ನೌಕರರ ಸೇವಾ ಅವಧಿ, ಅವರ ಧಾರಣೆ ಮಾಡಿರುವ ಹುದ್ದೆಯ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ವೇತನ ಹಾಗೂ ಅನ್ವಯಿಸುವ ಇತರೆ ಅಂಶಗಳನ್ನು ಪರಿಗಣಿಸಿ ನಿಯಮಾನುಸಾರ ಅವರ ಪಿಂಚಣಿ, ನಿವೃತ್ತಿ ಉಪದಾನ ಮತ್ತು ಉಪಲಬ್ಧಗಳನ್ನು ಲೆಕ್ಕಹಾಕಿ ನೀಡಲಾಗುತ್ತದೆ.<br><br>ರಾಜ್ಯ ಸರ್ಕಾರಿ ನೌಕರರ ಸೇವಾ ಅವಧಿ ಮತ್ತು ಪಡೆಯುತ್ತಿರುವ ವೇತನ ಇತ್ಯಾದಿ ಅಂಶಗಳು ನೌಕರರಿಂದ ನೌಕರರಿಗೆ ಭಿನ್ನವಾಗಿರುವುದರಿಂದ ಇದನ್ನು ತುಲನೆ ಮಾಡಲು ಬರುವುದಿಲ್ಲ. |

**ಸಂಖ್ಯೆ: ಆಇ 19 ಎಸ್‌ಆರ್‌ಪಿ 2018**

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ